ಮೈಸೂರು ಗವರ್ಮೆಂಟ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಮತ್ತು ಅಗ್ರಿಕಲ್ಚರಲ್ ಬ್ಯಾಂಕುಗಳ ಇನ್‌ಸ್ಪೆಕ್ಟರವರ ಆಫೀಸಿನಿಂದ.

ಎಲ್ಲಾ ಅಗ್ರಿಕಲ್ಚರಲ್ ಬ್ಯಾಂಕುಗಳ ಪ್ರಿಸಿಡೆಂಟ್ ಮತ್ತು ಪಿಜಂಟರಿಗೆ—

ರೆವಿನ್ಯೂ ಕಮಿಷನರ್ ಸಾಹೇಬರವರ 1907ನೆ ಇಸವಿ ಜುಲೈ 26ನೆ ತಾರೀಖು 1501-9ನೆ ನಂಬರು ಸರ್ಕ್ಯುಲರ್ ಅನುಸರಿಸಿ ಕೊಡಲ್ಪಟ್ಟ ಸರ್ಕ್ಯುಲರ್ ಹುಕುಂ—

ನಂಬರು 134 - A. B. ಬೆಂಗಳೂರು, ತಾರೀಖು 16ನೆ ಆಗಸ್ಟು 1907ನೆ ಇಸವಿ.

ಗೌರನಮೆಂಟಿನಿಂದ ಬ್ಯಾಂಕುಗಳಿಗೆ ಕೊಟ್ಟಿದ್ದ ಸಾಲವನ್ನು ಸಂಪೂರ್ಣವಾಗಿ ವಸೂಲ್ಮಾಡಬೇಕೆಂದು ಸರ್ಕಾರದವರು ಹುಕುಂ ಅಪ್ಪಣೆ ಮಾಡಿದಮೇಲೂ ಅಂಥಾ ಬ್ಯಾಂಕುಗಳು ಮೆಂಬರುಗಳಿಗೆ ಸಾಲವನ್ನು ಕೊಡುತ್ತಾ ಇರುವಂತೆ ಕೆಲವು ಸಂದರ್ಭಗಳಲ್ಲಿ ರೆವಿನ್ಯೂ ಕಮಿಷನರ್ ಸಾಹೇಬರವರ ಜಾಹಿರಾತಿಗೆ ಬಂದಿರುತ್ತೆ. ಹೀಗೆ ಮಾಡುವದು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ 75ನೆ ಪ್ಯಾರಾಕ್ಕೆ ವಿರೋಧವಾಗಿರುತ್ತೆ. ಸದರಿ ರೂಲು ಪ್ರಕಾರ ಮೇಲೆ ನಮೂದಿಸಿದಂತೆ ಗವರ್ಮೆಂಟಿನವರು ಅಪ್ಪಣೆ ಮಾಡಿದ ನಂತರ ಬ್ಯಾಂಕಿನ ಅಧಿಕಾರಿಗಳು ಬ್ಯಾಂಕನ್ನು ವೋಕೂಫ್ ಮಾಡುವದಕ್ಕೆ ತಕ್ಕ ತರದೂದನ್ನು ನಡೆಸುವದಕ್ಕೆ ಬದ್ಧರಾಗಿರುತ್ತಾರೆ. ಮುಂದೆ ಬ್ಯಾಂಕಿಗೆ ಬರಬೇಕಾದ ಸಾಲದ ಪೈಕಿ ವಸೂಲು ಬಂದ ಮೊಬಲಗನ್ನು ಬ್ಯಾಂಕಿನ ಅಧಿಕಾರಿಗಳು ಪುನಃ ಮೆಂಬರುಗಳಿಗೆ ಸಾಲಗಳನ್ನು ಕೊಡಕೂಡದು. ವಸೂಲಾದ ಹಾಗೆಲ್ಲಾ ಖಜಾನೆಗೆ ಜಮಾ ಕಟ್ಟಿಸಿ ಈ ಆಫೀಸಿಗೆ ಆಗಿಂದಾಗ್ಗೆ ರಿಪೋರ್ಟು ಮಾಡುತ್ತಾ ಬರಬೇಕು.

ಎಂ. ಶಾಮರಾವ್,
ರಿಜಿಸ್ಟ್ರಾರ್, ಕೋ ಆಪರೇಟಿವ್ ಸೊಸೈಟೀಸ್ ಇ೯ ಮೈಸೂರು,
ಮತ್ತು ಇನ್‌ಸ್ಪೆಕ್ಟರ್ ಆಫ್ ಅಗ್ರಿಕಲ್ಚರಲ್ ಬ್ಯಾಂಕ್ಸ್.

ಮೈಸೂರ ಗೆಜೆಟ ಚಂದಾದಾರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸು ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ. ರೂ. ಆ.	ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ. ರೂ. ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಚಷ್ ಮಾಹೇ ಯಾ ಕ್ವಾರ್ಟರಿಗ		

ದಾವಾಷಾಯಿ ಪ್ರಕಾರ ದರಗಳು.

	ರೂ. ಆ.
ಚಾಲ್ತಿ ವರುಷದ ಗೆಜೆಟಿ ಕಾಪಿ 1ಕ್ಕೆ ರೆಗ್ಯುಲೇರ್ಷ ಯಾ ಆಕ್ಟ್ಸಗಳು ಯಾವದೂ ಇಲ್ಲದಿದ್ದರೆ.	0 8
ಹಿಂದಿನ ವರುಷದ ಗೆಜೆಟಿ ಕಾಪಿಗಳಿಗೆ ಚಾರ್ಜ್ ಕೇಳಿ ತಿಳಿದುಕೊಳ್ಳಬಹುದು.	

1891ನೆ ಇಸವಿ ಜುಲೈ 2ನೆ ಮುಕ್ಕಂ 155ನೆ ನಂಬರ್ ಉಳ್ಳ ಗವರ್ಮೆಂಟಿ ಇಸ್ತಿಹಾರ್‌ನಾಮಾ ಅನುಸರಿಸಿ ಕನ್ನಡ ಗೆಜೆಟಿ ಮೈಸೂರು ಸೀಮೆಯಲ್ಲಿನ ಪಟೇಲ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭೋಗಿಕೆ ಕೆಲಸ ನೋಡುತಲಿರಬೇಕೆಂಬದಾಗಿ ಆಯಾ ತಾಲ್ಲೂಕಿನ ಅಮಲ್ದಾರರಿಂದ ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂ 21ನೆ ಮುಕ್ಕಂ 24205—6—ಜಿ. 6200ನೆ ನಂಬರ್ ಗವರ್ಮೆಂಟ್ ಆರ್ಡರ್ ಅನುಸರಿಸಿ ಮೈಸೂರ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1860ನೆ ಇಸವಿ XXVIIನೆ ಆಕ್ಟ್ ಅನುಸರಿಸಿ ಸರ್ಟಿಫಿಕೇಟಿ

	ರೂ. ಆ.
ಬಗ್ಯೆ ನೋಟಿಸುಗಳು:—	
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ	2 8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ	1 4
ಸಿವಿಲ್ ಪ್ರೊಸಿಜ್ಯೂರ್ ಕೋಡಿನ 347ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸುಗಳಿಗೆ:—	
ಮೊದಲನೇ ಸಲಕ್ಕೆ	5 0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	2 8
ಸಿವಿಲ್ ಪ್ರೊಸಿಜ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.	
ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಯೆ ರೆವಿನ್ಯೂ ಆಫೀಸರಗಳು ಕೊಡುವ ನೋಟಿಸುಗಳಿಗೆ:—	
ಮೊದಲನೇ ಸಲಕ್ಕೆ ಪುಟ 1ಕ್ಕೆ	10 0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ ,,	5 0
	2 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಜ್ಜಿ 1ಕ್ಕೆ ..	0 8
ಎರಡನೇ ದಫಾ " "	ಡಿಟ್ಟೋ	0 6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ		0 4

ಪರಾ.—ಗೆಜೆಟ್ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜು ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯುತಕ್ಕ ಬಗ್ಗೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಸೀತಿಯನ್ನು ಮಾತ್ರ ಆಫೀಸು ಮಜಕೂರಿಗೆ ಬಾಬಲೆ ಬಗ್ಗೆ ರವಾನಿಸತಕ್ಕದ್ದು. ಮನಿ ಆರ್ಡರ್ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸು ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರಟೆರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದುಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸು ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ಹ 12 ಘಂಟೆ ವಳಗಾಗಿ ಕಂಪ್ಟೆಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಆದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರಿ ಇಲ್ಲ.

ಸಿ. ಹೆಚ್. ಪಟ್ಟಿ,
ಕಂಪ್ಟೆಲರ್, ಮೈಸೂರ ಗೆಜೆಟ್ಟು.